# ಮುಂಬೈನಲ್ಲಿ ನಡೆಯುವ ಪ್ರಪ್ರಥಮ ರಾಷ್ಟ್ರೀಯ ಶಾಸಕರ ಸಮ್ಮೇಳನದಲ್ಲಿ ಸಭಾಪತಿ ಬಸವರಾಜ ಹೊರಟ್ಟಿ ವಿಶೇಷ ಪ್ರತಿನಿಧಿಯಾಗಿ ಭಾಗಿ



ಗದಗ, 9. ಪ್ರಜಾಪ್ರಭುತ್ವದಲ್ಲಿ ಶಾಸಕರ ಹಾಗೂ ಶಾಸನ ಸಭೆಯ ಮಹತ್ವದ ಕುರಿತು ಇದೇ 15, 16, 17 ರಂದು ಮುಂಬೈನ ಜಿಯೋವರ್ಲ್ಡ್ ಕನ್‌ವೆನ್‌ಶನ್ ಸೆಂಟರ್ ಬಾಂದ್ರಾ, ಕುರ್ಲಾ ಕಾಂಪ್ಲೆಕ್ಸ ಮುಂಬೈ ಮಹಾರಾಷ್ಟ್ರದಲ್ಲಿ ನಡೆಯುವ ಪ್ರಪ್ರಥಮ ರಾಷ್ಟ್ರೀಯ ಶಾಸಕರ (1st National Legislators conference) ಸಮ್ಮೇಳನದಲ್ಲಿ ಕರ್ನಾಟಕ ವಿಧಾನಪರಿಷತ್ತಿನ ಸಭಾಪತಿಗಳಾದ ಬಸವರಾಜ ಹೊರಟ್ಟಿಯವರು ವಿಶೇಷ ಪ್ರತಿನಿಧಿಯಾಗಿ ಭಾಗವಹಿಸಲಿದ್ದಾರೆ.

ಮೂರು ದಿನಗಳ ಕಾಲ ನಡೆಯುವ ರಾಷ್ಟ್ರೀಯ ಶಾಸಕರ ಸಮ್ಮೇಳನದಲ್ಲಿ ಸಭಾಪತಿ ಬಸವರಾಜ ಹೊರಟ್ಟಿಯವರು ಸುದೀರ್ಘ ನಾಲ್ಕು ದಶಕಗಳ ಅನುಭವವನ್ನು ಹಂಚಿಕೊಳ್ಳಲಿದ್ದಾರೆ. ನಾಲ್ಕು ದಶಕಗಳ ಹಿಂದೆ ಹಾಗೂ ಪ್ರಸ್ತುತ ಶಾಸನ ಸಭೆಯ ಮಹತ್ವ ಶಾಸಕರ ಕರ್ತವ್ಯಗಳ ಕುರಿತ ಸಂಗತಿಗಳ ಮೇಲೆ ಬೆಳಕು ಚೆಲ್ಲಲಿದ್ದಾರೆ.

ಮೇಲ್ಮನೆ ಹಾಗೂ ಕೆಳಮನೆಯ ಮಹತ್ವದ ಕುರಿತು ಸಹ ವಿಷಯ ಮಂಡಿಸಲಿದ್ದಾರೆ. ದೇಶ ಒಗ್ಗೂಡಿಸಲು, ಒಂದಾಗಿಸಲು, ಈ ಸಮ್ಮೇಳನ ಅತ್ಯಂತ ಅವಶ್ಯವಾಗಿದೆ. ಜಗತ್ತಿಗೆ ಭಾರತದ ಪ್ರಜಾಪ್ರಭುತ್ವದ ಕುರಿತು ಉತ್ತಮ ಸಂದೇಶಕೊಡಲು ಪ್ರಸ್ತುತ ರಾಷ್ಟ್ರೀಯ ಶಾಸಕರ ಸಮ್ಮೇಳನ ಅತ್ಯಂತ ಮಹತ್ವದ್ದಾಗಿದೆ.

ಈ ಕುರಿತು ಹಲವಾರು ವಿಷಯಗಳನ್ನು ಸಭಾಪತಿ ಬಸವರಾಜ ಹೊರಟ್ಟಿಯವರು ಸಭೆಯಲ್ಲಿ ಹಂಚಿಕೊಳ್ಳಲಿದ್ದಾರೆ.

ಈ ರಾಷ್ಟ್ರೀಯ ಸಮ್ಮೇಳನದಲ್ಲಿ ಹಿಂದಿನ ಲೋಕಸಭಾ ಸಭಾಧ್ಯಕ್ಷರು, ಪ್ರಸ್ತುತ ಲೋಕಸಭಾ ಸಭಾಧ್ಯಕ್ಷರು, ಉಪಸಭಾಧ್ಯಕ್ಷರು, ಅನೇಕ ಹಿರಿಯ ರಾಜಕೀಯ ವಿಶ್ಲೇಷಕರು, ಶಾಸಕರು, ವಿಶೇಷ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ. ಇದೊಂದು ಅತ್ಯಂತ ಮಹತ್ವದ ಸಮ್ಮೇಳನವಾಗಿದ್ದು ಪ್ರಸ್ತುತ ರಾಜಕಾರಣದ ಶುದ್ಧೀಕರಣಕ್ಕೆ ಈ ಸಮ್ಮೇಳನ ದಿಕ್ಸೂಚಿಯಾಗಬಲ್ಲದು ಎಂದು ಡಾ.ಬಸವರಾಜ ಧಾರವಾಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜೂ. 15-16-17 ರಂದು ಮುಂಬೈನಲ್ಲಿ ನಡೆಯುವ ಪ್ರಪ್ರಥಮ
# ರಾಷ್ಟ್ರೀಯ ಶಾಸಕರ ಸಮ್ಮೇಳನದಲ್ಲಿ ಬಸವರಾಜ ಹೊರಟ್ಟಿ ಪ್ರತಿನಿಧಿಯಾಗಿ ಭಾಗಿ

ಗದಗ, ಜೂ. 9. ಪ್ರಜಾಪ್ರಭುತ್ವದಲ್ಲಿ ಶಾಸಕರ ಹಾಗೂ ಶಾಸನ ಸಭೆಯ ಮಹತ್ವದ ಕುರಿತು ಇದೇ 15, 16, 17 ರಂದು ಮುಂಬೈನ ಜಿಯೋವರ್ಲ್ಡ್ ಕನ್ವೆನ್‌ಶನ್ ಸೆಂಟರ್ ಬಾಂದ್ರಾ, ಕುರ್ಲಾ ಕಾಂಪ್ಲೆಕ್ಸ ಮುಂಬೈ ಮಹಾರಾಷ್ಟ್ರದಲ್ಲಿ ನಡೆಯುವ ಪ್ರಪ್ರಥಮ ರಾಷ್ಟ್ರೀಯ ಶಾಸಕರ ಸಮ್ಮೇಳನದಲ್ಲಿ ಕರ್ನಾಟಕ ವಿಧಾನಪರಿಷತ್ತಿನ ಸಭಾಪತಿಗಳಾದ ಬಸವರಾಜ ಹೊರಟ್ಟಿಯವರು ವಿಶೇಷ ಪ್ರತಿನಿಧಿಯಾಗಿ ಭಾಗವಹಿಸಲಿದ್ದಾರೆ.



ಮೂರು ದಿನಗಳ ಕಾಲ ನಡೆಯುವ ರಾಷ್ಟ್ರೀಯ ಶಾಸಕರ ಸಮ್ಮೇಳನದಲ್ಲಿ ಸಭಾಪತಿ ಬಸವರಾಜ ಹೊರಟ್ಟಿಯವರು ಸುಧೀರ್ಘ ನಾಲ್ಕು ದಶಕಗಳ ಅನುಭವವನ್ನು ಹಂಚಿಕೊಳ್ಳಲಿದ್ದಾರೆ. ನಾಲ್ಕು ದಶಕಗಳ ಹಿಂದೆ ಹಾಗೂ ಪ್ರಸ್ತುತ ಶಾಸನ ಸಭೆಯ ಮಹತ್ವ ಶಾಸಕರ ಕರ್ತವ್ಯಗಳ ಕುರಿತ ಸಂಗತಿಗಳ ಮೇಲೆ ಬೆಳಕು ಚಲ್ಲಲಿದ್ದಾರೆ. ಮೇಲ್ಮನೆ ಹಾಗೂ ಕೆಳಮನೆಯ ಮಹತ್ವದ ಕುರಿತು ಸಹ ವಿಷಯ ಮಂಡಿಸಲಿದ್ದಾರೆ. ದೇಶ ಒಗ್ಗೂಡಿಸಲು, ಒಂದಾಗಿಸಲು, ಈ ಸಮ್ಮೇಳನ ಅತ್ಯಂತ ಅವಶ್ಯವಾಗಿದೆ. ಜಗತ್ತಿಗೆ ಭಾರತದ ಪ್ರಜಾಪ್ರಭುತ್ವದ ಕುರಿತು ಉತ್ತಮ ಸಂದೇಶಕೊಡಲು ಪ್ರಸ್ತುತ ರಾಷ್ಟ್ರೀಯ ಶಾಸಕರ ಸಮ್ಮೇಳನ ಅತ್ಯಂತ ಮಹತ್ವದ್ದಾಗಿದೆ. ಈ ಕುರಿತು ಹಲವಾರು ವಿಷಯಗಳನ್ನು ಸಭಾಪತಿ ಬಸವರಾಜ ಹೊರಟ್ಟಿಯವರು ಸಭೆಯಲ್ಲಿ ಹಂಚಿಕೊಳ್ಳಲಿದ್ದಾರೆ.

ಈ ರಾಷ್ಟ್ರೀಯ ಸಮ್ಮೇಳನದಲ್ಲಿ ಹಿಂದಿನ ಲೋಕಸಭಾ ಸಭಾಧ್ಯಕ್ಷರು, ಪ್ರಸ್ತುತ ಲೋಕಸಭಾ ಸಭಾಧ್ಯಕ್ಷರು, ಉಪಸಭಾಧ್ಯಕ್ಷರು, ಅನೇಕ ಹಿರಿಯ ರಾಜಕೀಯ ವಿಶ್ಲೇಷಕರು, ಶಾಸಕರು, ವಿಶೇಷ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ. ಇದೊಂದು ಅತ್ಯಂತ ಮಹತ್ವದ ಸಮ್ಮೇಳನವಾಗಿದ್ದು ಪ್ರಸ್ತುತ ರಾಜಕಾರಣದ ಶುದ್ಧೀಕರಣಕ್ಕೆ ಈ ಸಮ್ಮೇಳನ ದಿಕ್ಸೂಚಿಯಾಗಬಲ್ಲದು ಎಂದು ಡಾ.ಬಸವರಾಜ ಧಾರವಾಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.